ದಿನಾಂಕಃ 20.02.20252 ರಂದು ಸಾಕ್ಷಿದಾರರಿಗೆ ಪ್ರಮಾಣ ವಚನ ಬೋಧಿಸಲಾಯಿತು.

<u>ಪಾಟೀ ಸವಾಲುಃ ಆರೋಪಿ ಪರ ಶ್ರೀ ಹೆಚ್.ಎಸ್.ಆರ್. ವಕೀಲರಿಂದಃ</u>

ದಿ.02.11.2023 ರಂದು ಉಡುಪಿ ಡಿಪೋದಿಂದ ಹೊರಟಾಗ ಬೆ.6.30 ರ ಸಮಯವಾಗಿತ್ತು. ಈ ವಿಚಾರವನ್ನು ದೂರು, ಹೇಳಿಕೆ ಮತ್ತು ಮುಖ್ಯ ವಿಚಾರಣೆಯಲ್ಲಿ ಹೇಳಿಲ್ಲ. ಆ ದಿನ ಬೆಳಗ್ಗಿನ ಉಪಹಾರಕ್ಕೆಂದು ಕಾರ್ಕಳ ಬಳಿಯ ಬೆಳವಾಯಿಯಲ್ಲಿ ಬಸ್ ನ್ನು ನಿಲ್ಲಿಸಿದ್ದೆ. ಆಗ ಸಮಯ ಬೆಳಗ್ಗೆ 8.00 ಗಂಟೆಯಾಗಿತ್ತು. ಉಡುಪಿಯಿಂದ ಚಿಕ್ಕಮಗಳೂರಿಗೆ ತಲುಪಲು ಸುಮಾರು 6 ಗಂಟೆಗಳ ಕಾಲವಧಿ ಬೇಕು. ಸಾಮಾನ್ಯವಾಗಿ ಬೆ.6.50 ಕ್ಕೆ ಉಡುಪಿಯಿಂದ ಹೊರಟು ಮ.12.45 ರ ಸಮಯಕ್ಕೆ ಚಿಕ್ಕಮಗಳೂರು ತಲುಪುತ್ತೇವೆ. ಚಾರ್ಮುಡಿ ಘಾಟಿಯಲ್ಲಿ ಎರಡು ವೀವ್ ಪಾಯಿಂಟ್ ಇದೆ. ಆ ವೀವ್ ಪಾಯಿಂಟ್ ಗಳು ಯಾವ ಗ್ರಾಮದಲ್ಲಿ ಇದೆ ಎಂದು ಹೇಳಲು ಆಗುವುದಿಲ್ಲ. ನಾನು ಹೇಳಿರುವ ವೀವ್ ಪಾಯಿಂಟ್ ಕೊಟ್ಟಿಗೆಹಾರದಿಂದ 10 ಕಿ.ಮೀ ಇರಬಹುದು. ನಾನು ಹೇಳಿದ ಸ್ಕೂಟಿ ಪಾಸ್ ಆದ ಸಮಯಕ್ಕೆ ಅದರ ನೋಂದಣಿ ಸಂಖ್ಯೆ ನೋಡಿರಲಿಲ್ಲ, ಆದರೆ ಅದರ ಬಣ್ಣವನ್ನು ಗಮನಿಸಿದ್ದೆ. ಆ ಸ್ಕೂಟಿಯಲ್ಲಿ ಇಬ್ಬರು ಜನ ಪ್ರಯಾಣಿಸುತ್ತಿದ್ದರು.

ಚಾರ್ಮುಡಿ ಘಾಟಿ ರಸ್ತೆ ರಾಷ್ಟ್ರೀಯ ಹೆದ್ದಾರಿ ಎಂದರೆ ಸರಿ. ಕೊಟ್ಟಿಗೆಹಾರದಿಂದ ಚಾರ್ಮುಡಿ ಗ್ರಾಮದ ವರೆಗೂ ರಸ್ತೆ ಕಿರಿದಾಗಿದೆ ಎಂದರೆ ಸರಿ. ಆ ರಸ್ತೆಯಲ್ಲಿ ಪ್ರತೀದಿನ ಅನೇಕ ವಾಹನಗಳು ಓಡಾಡುತ್ತವೆ ಎಂದರೆ ಸರಿ. ನಾನು ಬಸ್ಸನ್ನು ಓಡಿಸುವಾಗ ನನ್ನ ವಾಹನದ ಮೇಲೆ ಗಮನ ಇರುತ್ತದೆ ಎಂದರೆ ಸರಿ. ನಾನು ಹೇಳಿದ ಸಮಯಕ್ಕೆ ನಮ್ಮ ಬಸ್ಸಿನಲ್ಲಿ ಸುಮಾರು 15-20 ಜನ ಇದ್ದಿರಬಹುದು. ವೀವ್ ಪಾಯಿಂಟ್ ಸಮೀಪದಲ್ಲಿ ಸ್ಕೂಟಿ ನಮ್ಮ ಬಸ್ಸಿನ ಮುಂದೆ ಪಾಸ್ ಆಯಿತು. ಆ ರಸ್ತೆ ಸ್ವಲ್ಪ ತಿರುವು ಇತ್ತು. ಸ್ಕೂಟಿ ಪಾಸ್ ಆದ ನಂತರ ಸುಮಾರು 150 ಮೀಟರ್ ನಷ್ಟು ಮುಂದಕ್ಕೆ ಹೋಗಿದ್ದೆವು. ನಮ್ಮನ್ನು ತಡೆದ ವ್ಯಕ್ತಿಯ ಹೆಸರು ಮತ್ತು ವಿಳಾಸ ಕೇಳಿರಲಿಲ್ಲ. ಸ್ಥಳದಲ್ಲಿ ಸುಮಾರು 10-15 ನಿಮಿಷಗಳ ಕಾಲ ಗಲಾಟೆಯಾಯಿತು. ಬಸ್ ನಲ್ಲಿ ಇದ್ದ ಪ್ಯಾಸೆಂಜರ್ ಗಳು ಮತ್ತು ಸ್ಕೂಟಿಯಲ್ಲಿ ಇದ್ದ ಮಹಿಳೆ ಜಗಳ ಬಿಡಿಸಲು ಪ್ರಯತ್ನಿಸಿದ್ದರು. ಆ ಮಹಿಳೆಯ ಹೆಸರನ್ನು ನಾವು ತಿಳಿದುಕೊಂಡಿಲ್ಲ. ಬಸ್ ನಲ್ಲಿ ಇದ್ದ ಪ್ರಯಾಣಿಕರ ಹೆಸರನ್ನು ಹೇಳಲು ಆಗುವುದಿಲ್ಲ.

ಆರೋಪಿ ಎರಡು ಬಾರಿ ನನ್ನ ಎಡಗೆನ್ನೆಗೆ ತನ್ನ ಕೈಯಿಂದ ಹಾಗೂ ಒಂದು ಬಾರಿ ಎಲ್ಮೇಟ್ ನಿಂದ ಹೊಡೆದರು. ಎಲ್ಮೇಟ್ ದಿಂದ ಮುಖದ ಹಣೆಯ ಭಾಗಕ್ಕೆ ಹೊಡೆದರು. ಎಂ.ಓ.2 ರಲ್ಲಿ ಹಣೆಗೆ ಹೊಡೆದರೆ ತೀವ್ರ ಸ್ವರೂಪದ ಗಾಯವಾಗುತ್ತದೆ ಎಂದರೆ ಸರಿ. ನನ್ನನ್ನು ಪೋಲಿಸರೇ ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದರು. ಆಸ್ಪತ್ರೆಯಲ್ಲಿ ನನಗೆ ಚಿಕಿತ್ಸೆ ಕೊಟ್ಟ ವೈದ್ಯರ ಹೆಸರು ನನಗೆ ಗೊತ್ತಿಲ್ಲ. ನನ್ನನ್ನು ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದ ಪೋಲಿಸರ ಹೆಸರು ಜಗದೀಶ್. ಈ ವಿಚಾರವನ್ನು ದೂರು, ಹೇಳಿಕೆ ಮತ್ತು ಮುಖ್ಯ ವಿಚಾರಣೆಯಲ್ಲಿ ಹೇಳಿಲ್ಲ. ಜಗದೀಶ್ ರವರು ನನ್ನನ್ನು ಆಸ್ಪತ್ರೆಗೆ ಕರೆದುಕೊಂಡು ಹೋಗಿಲ್ಲ ಎಂದರೆ ಸರಿಯಲ್ಲ. ಗಲಾಟೆಯಾದ ನಂತರವೂ ಸಹಾ ನಮ್ಮ ಬಸ್ಸಿನ ಚಾಲಕರೇ ಅದನ್ನು ಚಾಲನೆ

ಮಾಡಿದ್ದಾರೆ. ಸ್ಥಳದಿಂದ ಹೊರಡುವಾಗ ಬೆ.11.10 ರಿಂದ 11.30 ರ ಸಮಯವಾಗಿರಬಹುದು. ಆ ಸ್ಥಳದಿಂದ ಬಣಕಲ್ ಪೋಲಿಸ್ ಠಾಣೆಗೆ 12-15 ಕಿ.ಮೀ ಅಂತರ ಇರಬಹುದು. ಆ ದಿನ ಮೊದಲು ಕೊಟ್ಟಿಗೆಹಾರ ಬಸ್ ನಿಲ್ದಾಣದಲ್ಲಿ ಜನರನ್ನು ಬೇರೆ ಬಸ್ಸಿಗೆ ಹತ್ತಿಸಿ ನಂತರ ಪೋಲಿಸ್ ಠಾಣೆಗೆ ಹೋಗಿದ್ದೆವು. ಪೋಲಿಸ್ ಠಾಣೆಗೆ ಹೋಗಿದ್ದಾಗ ಸಮಯ ಸುಮಾರು 11.40 ರ ಸಮಯವಾಗಿರಬಹುದು.

ನಿಪಿ-1 ರ ದೂರನ್ನು ಬಣಕಲ್ ಪೊಲಿಸ್ ಠಾಣೆಯಲ್ಲಿ ಬರೆಯಲಾಗಿದೆ. ಪೋಲಿಸರು ಹೇಳಿದ ಹಾಗೇ ಬರೆದಿದ್ದೇನೆ ಎಂದರೆ ಸರಿಯಲ್ಲ. ನಿಪಿ-1 ಟೈಪ್ ಮಾಡಲಾಗಿದೆ ಎಂದರೆ ಸರಿ. ಸಾಕ್ಷಿಯು ಸ್ವತಃ ನಾನು ಹೇಳಿದ ಹಾಗೇ ಪೋಲಿಸರು ಟೈಪ್ ಮಾಡಿದ್ದಾರೆ ಎಂದು ನುಡಿಯುತ್ತಾರೆ. ದೂರನ್ನು ಟೈಪ್ ಮಾಡಿದ ಪೋಲಿಸರ ಹೆಸರು ನನಗೆ ಗೊತ್ತಿಲ್ಲ. ಆ ಸಮಯಕ್ಕೆ ಪೋಲಿಸ್ ಠಾಣೆಯಲ್ಲಿ ಸುಮಾರು 5 ಜನ ಪೋಲಿಸರು ಇದ್ದರು. ಅವರ ಹೆಸರುಗಳನ್ನು ಹೇಳಲು ಆಗುವುದಿಲ್ಲ. ಮಹಜರ್ ನ್ನು ಸ.4.30 ರಿಂದ 5.00 ರವರಗೆ ಬರೆಯಲಾಗಿದೆ. ಅದನ್ನು ಬರೆದ ಪೋಲಿಸರ ಹೆಸರು ನನಗೆ ಗೊತ್ತಿಲ್ಲ. ಮಹಜರ್ ನ್ನು ಎಷ್ಟು ಪುಟಗಳಲ್ಲಿ ಬರೆಯಲಾಗಿದೆ ಎಂದು ನನಗೆ ಗೊತ್ತಿಲ್ಲ. ಮಹಜರ್ ಕಾಲಕ್ಕೆ ಇಬ್ಬರು ಸಾಕ್ಷಿದಾರರು ಹಾಜರಿದ್ದು ಅವರ ಹೆಸರು ಗೊತ್ತಿಲ್ಲ. ಸುಮಾರು ಅರ್ಧ ಗಂಟೆಗಳ ಕಾಲ ಮಹಜರ್ ಮಾಡಲಾಗಿದೆ. ನಿಪಿ-4 ವೀವ್ ಪಾಯಿಂಟ್ ಬಳಿ ತೆಗೆದ ಪೋಟೋ ಅಲ್ಲ ಎಂದರೆ ಸರಿಯಲ್ಲ. ಆ ಪೋಟೋ ತೆಗೆದ ಸ್ಥಳದ ಪೂರ್ವಕ್ಕೆ ಘಾಟಿ, ಪಶ್ಚಿಮಕ್ಕೆ ಬೆಟ್ಟ, ಉತ್ತರ ಮತ್ತು ದಕ್ಷಿಣಕ್ಕೆ ರಸ್ತೆ ಇದೆ. ಎಂ.ಒ.1 ರ ಮೇಲೆ ಸಾಕ್ಷಿದಾರರ ಸಹಿ ಇರುವ ಚೀಟಿ ಇಲ್ಲ ಎಂದರೆ ಸರಿ.

ನಾನು ಹೇಳಿದ ದಿನಾಂಕದಂದು ಚಾರ್ಮುಡಿ ಘಾಟಿಯ ವೀವ್ ಪಾಯಿಂಟ್ ಬಳಿ ಒಬ್ಬ ಚಾಲಕ ಬೈಕ್ ನಲ್ಲಿ ಪಾಸ್ ಆದ ಎಂದು ಹೇಳಿರುವ ವಿಚಾರ ಸುಳ್ಳು ಎಂದರೆ ಸರಿಯಲ್ಲ. ಆ ಬೈಕ್ ಗ್ರೇ ಬಣ್ಣದ್ದಾಗಿತ್ತು ಎನ್ನುವುದು ನಿಜವಲ್ಲ ಎಂದರೆ ಸರಿಯಲ್ಲ. ಆ ಬೈಕಿನ ಚಾಲಕ ನಮ್ಮ ಬಸ್ ನ್ನು ಹಿಂಬಾಲಿಸಿಕೊಂಡು ಬಂದು ಬಸ್ ನ್ನು ಅಡ್ಡಗಟ್ಟಿ ನನಗೆ ಬೈದು ಹಲ್ಲೆ ಮಾಡಿದ್ದಾರೆ ಎಂದು ಹೇಳಿರುವ ವಿಚಾರ ಸುಳ್ಳು ಎಂದರೆ ಸರಿಯಲ್ಲ. ಮುಖ್ಯ ವಿಚಾರಣೆಯಲ್ಲಿ ಹೇಳಿರುವ ಬೈಕ್ ಸಂಖ್ಯೆ ಸುಳ್ಳು ಎಂದರೆ ಸರಿಯಲ್ಲ. ಚಾಸಾ-6 ಮತ್ತು 7 ರವರ ಸಮಕ್ಷಮ ಸ್ಥಳ ಮಹಜರ್ ಮಾಡಲಾಯಿತು ಎಂದು ಹೇಳಿರುವ ವಿಚಾರ ಸುಳ್ಳು ಎಂದರೆ ಸರಿಯಲ್ಲ. ಆ ಮಹಜರ್ ನ್ನು ನಾನು ಹೇಳಿದ ಸಮಯಕ್ಕೆ ಮಾಡಲಾಗಿಲ್ಲ ಎಂದರೆ ಸರಿಯಲ್ಲ. ನಾನು ಹೇಳಿದಂತೆ ಪೋಲಿಸರಿಗೆ ಯಾವುದೇ ಶರ್ಟ್ ಕೊಟ್ಟಿಲ್ಲ ಎಂದರೆ ಸರಿಯಲ್ಲ. ಆರೋಪಿ ನನ್ನ ಶರ್ಟ್ ನ್ನು ಹಿಡಿದು ಎಳೆದು ನನ್ನ ಕೆನ್ನೆಗೆ ಹೊಡೆದಿಲ್ಲ ಎಂದರೆ ಸರಿಯಲ್ಲ. ಎಂ.ಒ.1 ರಿಂದ ನನ್ನ ಹಣೆಗೆ ಹೊಡೆದಿದ್ದಾರೆ ಎಂದು ಹೇಳಿರುವ ವಿಚಾರ ಸುಳ್ಳು ಎಂದರೆ ಸರಿಯಲ್ಲ. ನಾನು ಹೇಳಿದಂತೆ ಯಾವುದೇ ಘಟನೆ ನಡೆಯದಿದ್ದರೂ ಆರೋಪಿಯ ವಿರುದ್ಧ ಸುಳ್ಳು ದೂರು ಕೊಟ್ಟು ಸುಳ್ಳು ಸಾಕ್ಷ್ಯನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಸಿ.ಸಿ.462/2024    ಪಿಡಬ್ಲ್ಯೂ-2

<u>ಮರು ವಿಚಾರಣೆ ಇಲ್ಲ.</u>

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)

ಓ ಹೇ ಕೇ ಸ ಇ ಎ ಒ.,

ಸಹಿ/-

ಸಾಕ್ಷಿ ಸಹಿಃ    C/c ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಪ್ರದನ್ಯಾದಂ.,
ಮೂಡಿಗೆರೆ.